# ಹಸಿರು ಹಕ್ಕಿಯ ಹಾವಭಾವ

ಹಸಿರೆಲೆಯ ನಡುವೆ ಎಲೆಯೇ ಆಗಿ ಕುಳಿತುಕೊಳ್ಳುವ ಈ ಲೀಫ್ ಬರ್ಡ್ ಅನ್ನು ಕ್ಯಾಮೆರಾದೊಳಕ್ಕೆ ಇಳಿಸಿಕೊಳ್ಳುವುದು ಸುಲಭದ ಕೆಲಸವೇನೂ ಅಲ್ಲ. ಛಾಯಾಗ್ರಾಹಕರ ತಾಳ್ಮೆಯನ್ನು ಪರೀಕ್ಷಿಸುವ ಈ ಹಕ್ಕಿ, ಹಲವು ಬಗೆಯ ಹಕ್ಕಿಗಳ ಸ್ವರವನ್ನು ಮಿಮಿಕ್ರಿ ಮಾಡುವುದರಲ್ಲಿ ನಿಸ್ಸೀಮ!

■ ಚಿತ್ರ-ಬರಹ: **ಆರ್.ಕೆ. ಮಧು**

ನನ್ನ ಹುಡುಕಾಟ ಆ ಹಕ್ಕಿಗೆ ಹುಡುಗಾಟವಾಗಿರಬೇಕು. ಹಸಿರೆಲೆ ನಡುವೆ ಎಲೆಯಂತೆಯೇ ಕಾಣುವ ಹಕ್ಕಿಗಳ ಹುಡುಕುವುದು ನನಗಂತೂ ಹುಡುಗಾಟವಾಗಿರಲಿಲ್ಲ. ನಮ್ಮಿಬ್ಬರ ನಡುವೆ ಐಸ್– ಪಾಯ್ಸ್ ಆಟದಂತೆ. ಆ ಎಲೆಗಳ ನಡುವೆ ಅವುಗಳ ಹುಡುಕುವುದು ತ್ರಾಸವಾಯಿತು. ಆದರೆ ನನ್ನ ಕುತೂಹಲ ಇಮ್ಮಡಿಸಿತು. ವಾಹ್... ಎಷ್ಟು ಸುಂದರ ಹಕ್ಕಿಗಳಿವು!

ಎಲೆ ಹಕ್ಕಿ, ಲೀಫ್ ಬರ್ಡ್, ಕ್ಲೋರೋಪ್ಸಿಸ್, ಹಸಿರು ಪಿಕಳಾರ ಮುಂತಾದ ಹಲವು ನಾಮಾಂಕಿತ ಈ ಮುದ್ದು ಹಕ್ಕಿ ಕ್ಲೋರೋಪ್ಸಿಸ್ ಕೊಚಿನ್ ಚೆನ್ನಿಸ್ ಎಂಬ ವರ್ಗಕ್ಕೆ ಸೇರಿದ್ದು. ನಮ್ಮ ಊರ ಪಿಕಳಾರದ ಗಾತ್ರ ಹೊಂದಿದ್ದು ನೀಲಿ ಬಣ್ಣದ ಮೀಸೆ ಭಾಗ, ಕಪ್ಪು ಕೆನ್ನೆ, ತುಸು ಬಾಗಿದ ಕೊಕ್ಕು, ಉದ್ದ ಬಾಲದ ಹಕ್ಕಿ. ಹೆಣ್ಣು ಹಕ್ಕಿ ತುಸು ತೆಳು ಹಸಿರು ಕೆನ್ನೆ ಹಾಗೂ ಗಂಟಲು ಭಾಗ ಹೊಂದಿದ್ದು, ಮಿಕ್ಕಂತೆ ಗಂಡನ್ನು ಹೋಲುತ್ತದೆ. ಯಾವಾಗಲೂ ಜತೆಯಾಗಿ ಇಲ್ಲವೇ ಸಣ್ಣ ಗುಂಪುಗಳಲ್ಲಿ ವಾಸಿಸುತ್ತವೆ.

ಇವುಗಳು ಹಸಿರು ಎಲೆಯ ನಡುವೆ ಹುದುಗಿದರೆ ಕೇವಲ ಇದರ ಸ್ವರ ಕೇಳಬಹುದೇ ಹೊರತು, ಕಾಣಲು ಹರಸಾಹಸ ಪಡಬೇಕು. ಅಂತೆಯೇ ನನ್ನ ಹರಸಾಹಸದ ಕಥನವಿದು. ಕಣ್ಣೆದುರೇ ಹಾರಿ ಬಂದ ಹಕ್ಕಿಗಳ ಕಾಣಲು ಗಂಟೆಗಟ್ಟಲೇ ಕಾಯಬೇಕಾಯಿತು. ಅದಕ್ಕೇ ಇದು ಐಸ್–ಪಾಯ್ಸ್ ಆಟ ಎಂದದ್ದು!

ಹಲವು ಬಗೆಯ ಹಕ್ಕಿಯ ಸ್ವರವನ್ನು  ಅನುಕರಣೆ ಮಾಡುವ ಎಲೆ ಹಕ್ಕಿ ಪಕ್ಷಿ ಜಗತ್ತಿನ ಸೋಜಿಗ ಹಕ್ಕಿ. ಅಷ್ಟೇ ಸುಂದರಿ ಕೂಡಾ. ಸಿಂಪಿಗ, ಕರಿ ಭಾರದ್ವಾಜ ಹಕ್ಕಿ, ಮಧುರ ಕಂಠ ಹಕ್ಕಿ, ಕಿಂಗ್‌ಫಿಷರ್, ರಾಬಿನ್ ಮುಂತಾದ ಹಕ್ಕಿಗಳ ಸ್ವರ ಅನುಕರಣೆ ಮಾಡುವುದರಲ್ಲಿ ನಿಸ್ಸೀಮ! ಅದರಲ್ಲೂ ಈ ಎಲ್ಲಾ ಹಕ್ಕಿಗಳ ಸ್ವರವನ್ನು ಒಂದರ ನಂತರ ಒಂದರಂತೆ ಕೂಗುವ ಎಲೆ ಹಕ್ಕಿ, ಪಕ್ಷಿಲೋಕದ ರೋಚಕವೇ ಸರಿ. ಹಾಗಾಗಿ ಹಲವು ಹಕ್ಕಿಗಳು ಇದರ ಗೂಡು ಇರುವಲ್ಲಿಯೇ ತಾವೂ ಗೂಡು ಮಾಡುತ್ತವೆ– ತಮ್ಮ ಮರಿಗಳ ರಕ್ಷಣೆಗಾಗಿ.

ಈ ಹಕ್ಕಿಗಳ ಗೂಡು ಲೋಟದ ಆಕೃತಿಯಂತಿವೆ. ಸಾಮಾನ್ಯವಾಗಿ ಎರಡು ಕೆಂಪು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ. ಡಿಸೆಂಬರ್– ಮೇ ತಿಂಗಳು ಇವುಗಳ ಸಂತಾನೋತ್ಪತ್ತಿಯ ಕಾಲ. ಭಾರತ ಹಾಗೂ ಶ್ರೀಲಂಕಾಗಳಲ್ಲಿ ಹೆಚ್ಚಾಗಿ ಕಂಡು ಬರುತ್ತವೆ. ಭಾರತದಲ್ಲಿ ಮಧ್ಯೆ ಭಾರತದಿಂದ ದಕ್ಷಿಣ ಭಾರತದಾದ್ಯಂತ ಕಂಡು ಬರುತ್ತದೆ. ನೀಲ ರೆಕ್ಕೆಯ ಎಲೆ ಹಕ್ಕಿ, ಚಿನ್ನದ ತಲೆಯ ಹಕ್ಕಿ, ಕೇಸರಿ ಹೊಟ್ಟೆಯ ಹಕ್ಕಿ– ಇವು ಈ ಹಕ್ಕಿಯ ಇತರ ಪ್ರಭೇದಗಳು.



ಕಡೆಗೂ ಈ ಹಕ್ಕಿಯ ಜತೆಗಿನ ಐಸ್– ಪಾಯ್ಸ್ ಆಟದಲ್ಲಿ ನನ್ನ ತಾಳ್ಮೆಯೇ ಗೆದ್ದಿತು. ಹುಳುಗಳನ್ನು ಹೆಕ್ಕುತ್ತಾ ಹಣ್ಣುಗಳನ್ನು ತಿನ್ನುತ್ತಾ ಚುರುಕಿನಿಂದ ಚಲಿಸುತ್ತಿದ್ದ ಅದನ್ನು ಸೆರೆ ಹಿಡಿದೆ. ನಾಚಿಕೆಯ ಈ ಸುರಸುಂದರಿಯ ಓರೆ ನೋಟದಿಂದ ನನ್ನ ಕ್ಯಾಮೆರಾವನ್ನೇ ದಿಟ್ಟಿಸುತ್ತಿತ್ತು. ಅಪಾಯ ಏನೂ ಇಲ್ಲ ಅನ್ನಿಸಿತೇನೋ. ಒಂದಿಷ್ಟು ವೈಯಾರದಲ್ಲಿ ಓಡಾಡಿ ಫೋಟೋಗೆ 'ಪೋಸ್' ಕೊಟ್ಟಿತು. ಎಲೆಯ ಮರೆಯಲ್ಲಿದ್ದ ತನ್ನ ಸಂಸಾರವನ್ನು ತೋರಿಸಿತು. ಗಂಡು ಹಕ್ಕಿ, ಜತೆಗಿದ್ದ ಮರಿಗಳು– ಅದೊಂದು ಸಂತಸದ ಸಂಸಾರವೇ ಸರಿ. ಕ್ಯಾಮೆರಾ ಪಟಪಟನೆ ಕೆಲಸ ಮಾಡಿತು. ಹಕ್ಕಿಗಳದ್ದು ಅವುಗಳದ್ದೇ ಆದ ಸಾಮ್ರಾಜ್ಯ. ತಮ್ಮ ಖಾಸಗಿ ಚಟುವಟಿಕೆಗಳನ್ನು ಸೆರೆ ಹಿಡಿಯುವುದನ್ನು ಅವು ಹೆಚ್ಚಾಗಿ ಇಷ್ಟಪಡುವುದಿಲ್ಲ. ಛಾಯಾಗ್ರಾಹಕರ ಕುರಿತು ಅನುಮಾನವಂತೂ ಇದ್ದೇ ಇರುತ್ತದೆ. ಆದರೆ ನಾವು ತಾಳ್ಮೆಯಿಂದ ಕಾದರೆ ಅವುಗಳಿಗೆ ಸಣ್ಣ ಮಟ್ಟಿನ ವಿಶ್ವಾಸವಂತೂ ಬಂದೇ ಬರುತ್ತದೆ. ಎಲೆ ಹಕ್ಕಿಯ ಸ್ವಲ್ಪ ಹೊತ್ತು ಹೀಗೆ ಅಡ್ಡಾಡಿ, ಮತ್ತೇನು ಅನ್ನಿಸಿತೋ ಇನ್ನೊಂದು ಮರಕ್ಕೆ ಹಾರಿ ಹೋಯಿತು. ■

